
# ಸತ್ಯವೇದವನ್ನು ತೆರೆಯುವ ಬೀಗದಕ್ಕೈ

## ಅಧ್ಯಯನ # 1




## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 1

## ಸತ್ಯವೇದವನ್ನು ತೆರೆಯುವ ಬೀಗದಕೈ


<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಈ ದಿನ ನಾವು ಪರಿಶುದ್ಧ ಗ್ರಂಥವಾದ – ಸತ್ಯವೇದವನ್ನು ಹೇಗೆ ಅಧ್ಯಯನ ಮಾಡುವುದು ಮತ್ತು ತಿಳಿದುಕೊಳ್ಳುವುದು ಎಂದು ನೋಡೋಣ.

ಈ ಪುಸ್ತಕವನ್ನು ಅಷ್ಟು ಸುಲಭವಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ!

ಸತ್ಯವೇದವನ್ನು ಪೂರ್ಣವಾಗಿ ತಿಳಿದುಕೊಂಡಿದ್ದೇನೆ ಮತ್ತು ಚೆನ್ನಾಗಿ ಗೊತ್ತಿದೆ ಎಂದು ಹೇಳುವವರು ಬಹಳ ವಿರಳ!




**"ಸತ್ಯವೇದ" ಎಂಬ ಪದದ ಅರ್ಥವೇನು?** ಎಂಬುದರೊಂದಿಗೆ ನಾವು ಆರಂಭಿಸೋಣ.




ಇದು ಗ್ರೀಕ್ ಪದವಾದ "**ಬಿಬ್ಲೋಸ್**" ನಿಂದ ಬಂದಿದೆ.

ಇದರ ಅರ್ಥ– ಪುಸ್ತಕ.

ಇದು ಯಾರ ಪುಸ್ತಕ ! – **ದೇವರ ಪುಸ್ತಕ !**

ಇದು ಬಹಳ ಸುಲಭವಾಗಿ ಕಂಡರೂ,
ಅಧಿಕ ಬಲವುಳ್ಳದ್ದು!

**ದೇವರು ಸಕಲ ಮನುಕುಲಕ್ಕೆ ತನ್ನ ವಾಕ್ಯಗಳನ್ನು ಪುಸ್ತಕವಾಗಿ ಬರೆದನು!**

ಈ ಲೋಕದಲ್ಲಿ ಅನೇಕ ದೇವರುಗಳ ಮತ್ತು ಧರ್ಮದವರ ಪರಿಶುದ್ಧವೆಂದು ಕರೆಯುವ ಅನೇಕ ಪುಸ್ತಕಗಳಿವೆ.




ಹಿಂದುಗಳ ಪರಿಶುದ್ಧ ಪುಸ್ತಕಗಳನ್ನು ವೇದ ಎಂದು ಕರೆಯುತ್ತಾರೆ–

**ಋಗ್ವೇದ, ಯಜುರ್ ವೇದ, ಸಾಮವೇದ ಮತ್ತು ಅಥರ್ವವೇದ.**

ಆದರೆ ಭಾರತದಲ್ಲಿ ಬೈಬಲನ್ನು –
ಸತ್ಯವೇದ ಎಂದು ಕರೆಯುತ್ತಾರೆ.

ಸತ್ಯವೇದವನ್ನು ತೆರೆಯಲು ಮತ್ತು ಅರ್ಥಮಾಡಿಕೊಳ್ಳಲು ಬೇಕಾದ ಬೀಗದಕೈಯನ್ನು ನೋಡುವ ಮೊದಲು ಸತ್ಯವೇದದಲ್ಲಿರುವ ಸತ್ಯಾಂಶ ಮತ್ತು ಅದರ ರಚನೆಯ ವಿವರಣೆಯನ್ನು ಅಭ್ಯಾಸ ಮಾಡೋಣ–

## ಸತ್ಯವೇದದಲ್ಲಿ ಎರಡು ವಿಭಾಗಗಳಿವೆ –



ಯೇಸು ಕ್ರಿಸ್ತನಿಗೆ ಮುಂಚೆ

**ಹಳೆಯ ಒಡಂಬಡಿಕೆ**

ಯೇಸು ಕ್ರಿಸ್ತನ ನಂತರ

**ಹೊಸ ಒಡಂಬಡಿಕೆ.**




**ಹಳೆಯ ಒಡಂಬಡಿಕೆಯಲ್ಲಿ** ಒಟ್ಟು **39** ಪುಸ್ತಕಗಳಿವೆ ಮತ್ತು **ಹೊಸ ಒಡಂಬಡಿಕೆಯಲ್ಲಿ**
**27** ಪುಸ್ತಕಗಳಿವೆ ಸತ್ಯವೇದದಲ್ಲಿ **ಒಟ್ಟು 66** ಪುಸ್ತಕಗಳಿವೆ
– ಇದೊಂದು ಪುಸ್ತಕಗಳ ಪುಸ್ತಕ!

ಕೆಲವು ಕ್ರೈಸ್ತರು ಉದಾಹರಣೆಗೆ ರೋಮನ್ ಕೆಥೋಲಿಕ್ ಸ್ನೇಹಿತರ ವಿಚಾರದ ಪ್ರಕಾರ
ಸತ್ಯವೇದದಲ್ಲಿ **66**ಕ್ಕೂ ಹೆಚ್ಚಿನ ಪುಸ್ತಕಗಳಿವೆ!

ಯಾವುದು ಸರಿ ಎಂದು ವಾಗ್ವಾದ ಮಾಡುವದರ ಬದಲು ನಾವು
ದೇವರ ವಾಕ್ಯವನ್ನು ತಿರುಗಿಸಿ ನೋಡೋಣ.

ಇದನ್ನು **ಯಾಜಕಕಾಂಡ 24:5-7** ರಲ್ಲಿ ನಿರೂಪಿಸಲಾಗಿದೆ. ಈ "ರೊಟ್ಟಿಯನ್ನು
ಆರಾರರ ಮೇರೆಗೆ_ಎರಡು ರಾಶಿಗಳಾಗಿ ಚೊಕ್ಕ ಬಂಗಾರದ ಮೇಜಿನ ಮೇಲೆ
ಯೆಹೋವನ ಸನ್ನಿಧಿಯಲ್ಲಿ ಇಡಬೇಕು"

– ಇದು ದೇವರ "**ಆತ್ಮೀಕ ರೊಟ್ಟಿ**" ಯಾದ **66**
ಪುಸ್ತಕಗಳನ್ನು ಸೂಚಿಸುತ್ತದೆ!




(ಸತ್ಯವೇದದಲ್ಲಿ "ರೊಟ್ಟಿ" ಎಂಬುದು ದೇವರ ಬಾಯಿಂದ ಹೊರಡುವ ಪ್ರತಿಯೊಂದು
ಮಾತನ್ನು ಸೂಚಿಸುತ್ತದೆ. ಅಂದರೆ ಅದು "ಅಹಾರ" ವನ್ನು ಸೂಚಿಸುತ್ತದೆ. –
ಯೆರೆಮಿಯ **15:16**, ಧರ್ಮೋಪದೇಕಾಂಡ **8:3)**

ಹಳೆಯ ಒಡಂಬಡಿಕೆಯ ಮೊದಲ ಐದು ಪುಸ್ತಕಗಳನ್ನು
“ಪೆಂಟಟೋಕ್”
ಎಂದು ಕರೆಯುತ್ತಾರೆ ಇದನ್ನು ಬರೆದವರು ಮೋಶೆ.



ಯೆಹೂದ್ಯರು ಇದನ್ನು **“ತೋರಾ”** ಎಂದು ಕರೆಯುತ್ತಾರೆ
ದೇವರಿಂದ ಬಂದ

ಈ ಧರ್ಮಶಾಸ್ತ್ರ ಅವರಿಗೆ ಬಹಳ ಪವಿತ್ರವಾದದ್ದು!

ಈ ಸತ್ಯವೇದವನ್ನು ಬರೆಯಲು ನಂಬಲು ಅಸಾಧ್ಯವಾದ
ಒಟ್ಟು **1700** ವರ್ಷಗಳಾದವು

- ಹಳೆಯ ಒಡಂಬಡಿಕೆಯನ್ನು ಬರೆಯಲು **1600** ವರ್ಷಗಳು ಹಿಡಿಯಿತು
- ಮತ್ತು ಹೊಸ ಒಡಂಬಡಿಕೆಗೆ **100** ವರ್ಷಗಳು ಹಿಡಿದವು.

ಈ ಲೋಕದಲ್ಲಿ ಬೇರೆ ಯಾವ ಪುಸ್ತಕವನ್ನು ಇಷ್ಟು ಹೆಚ್ಚಿನ ಕಾಲದಲ್ಲಿ
ರಚಿಸಲಾಯಿತು ಎಂದು ಹೊಗಳಿಕೊಳ್ಳಲು ಸಾಧ್ಯವಿಲ್ಲ.

**ಸತ್ಯವೇದ ಪುಸ್ತಕದಲ್ಲಿ ಮೊಟ್ಟಮೊದಲು ಬರೆದ ಪುಸ್ತಕ ೦ಯಾವುದು?**

ಮೊಟ್ಟಮೊದಲು ಬರೆದ ಪುಸ್ತಕವೆಂದರೆ ಅದು ಯೋಬನ ಪುಸ್ತಕ ಮತ್ತು
ಕೊನೆಯ ಪುಸ್ತಕವಾದ ಪ್ರಕಟಣೆಯನ್ನು **ಕ್ರಿ.ಶ 96** ರಲ್ಲಿ ರಚಿಸಲಾಯಿತು.



ದೇವರು ಒಟ್ಟು 40 ಲೇಖಕರನ್ನು ತನ್ನ ಸಾಧನವಾಗಿ ವಿವಿಧ ಹಿನ್ನಲೆಯಲ್ಲಿರುವವರನ್ನು ಉಪಯೋಗಿಸಿದ್ದಾರೆ.



**ಲೂಕ** ವೈದ್ಯನಾಗಿದ್ದನು.
**(ಕೊಲೊಸ್ಸೆಯವರಿಗೆ 4:14)**



**ಪೌಲನು**
ಫರಿಸಾಯನಾಗಿದ್ದನು
**(ಅಪೊಸ್ತಲರ ಕೃತ್ಯಗಳು 23:6)**



**ಮತ್ತಾಯನು**
ಸುಂಕದವನಾಗಿದ್ದನು
**(ಲೂಕ 5:27,28)**

**ಆಮೋಸನು** ಕುರುಬನಾಗಿದ್ದನು
**(ಆಮೋಸ 7:15)**



**ಮೋಶೆಯು** ಸಕಲ ಶಾಸ್ತ್ರಗಳಲ್ಲಿ ಪ್ರವೀಣನಾಗಿದ್ದನು ಮತ್ತು ಐಗುಪ್ತ್ಯದ ಮುಂದಿನ ಪರೋಹನಾಗಲು ತರಭೇತಿ ಹೊಂದಿದ್ದನು.
**(ವಿಮೋಚನಕಾಂಡ 2:10)**





**ದಾವೀದನು** ಕುರುಬನಾಗಿದ್ದನು
ನಂತರ ಅರಸನಾದನು
**(1 ಸಮುವೇಲ 16:19)**



**ಸೊಲೊಮೋನ** ಅತ್ಯಂತ ಜ್ಞಾನಿಯಾದ
ರಾಜನು **(1 ಅರಸುಗಳು 2:12)**

ಪೇತ್ರ ಮತ್ತು ಯೋಹಾನರು ಬೆಸ್ತರು **(ಮತ್ತಾಯ 4:18)** ಇತರೆ,



ಸತ್ಯವೇದದಲ್ಲಿನ ಅತ್ಯಂತ ಅದ್ಭುತವಾದ ಮತ್ತು ನಂಬಲು ಅಸಾಧ್ಯವಾದ ವಿಷಯವೇನೆಂದರೆ ಇದರಲ್ಲಿರುವ ಎಲ್ಲಾ ವಾಕ್ಯಗಳು ಒಂದಕ್ಕೊಂದು ಹೊಂದಾಣಿಕೆಯಾಗಿದೆ ಮತ್ತು ಯಾವುದೇ ವಿಧವಾದ ವಿರೋಧತ್ವವು ಇರುವುದಿಲ್ಲ.

**ಮನುಷ್ಯರನ್ನು ಸಾಧನವಾಗಿ ಉಪಯೋಗಿಸಿರುವ ನಿಜವಾದ ಲೇಖಕನು**
**ದೇವರೇ ಎಂದು ಇದರಿಂದ ತಿಳಿದುಕೊಳ್ಳುತ್ತೇವೆ.**

ಇದನ್ನು ಕೆಳಗಿನ ವಾಕ್ಯವನ್ನು ಓದಿ ಖಚಿತ ಪಡಿಸಿಕೊಳ್ಳುತ್ತೇವೆ

## ಇಬ್ರಿಯರಿಗೆ 1:1-2, 2 ತಿಮೊಥೆಯನಿಗೆ 3 : 16

**"ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗ ಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯದಿವಸಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ. ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿದನು, ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು."**

**"ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ."**

ಲೋಕದಲ್ಲಿ ಅಧಿಕವಾಗಿ ಓದುವ ಪುಸ್ತಕವೆಂದರೆ ಅದು ಸತ್ಯವೇದ ಈ ಸತ್ಯವೇದವನ್ನು ಮಹಾತ್ಮಗಾಂಧಿ,

ಜವಹರಲಾಲ್ ನೆಹರು ಮತ್ತು ದಲೈಲಾಮ ಸಹ ಓದಿದ್ದಾರೆ

ನಂಬಿದರೆ ನಂಬಿ, ಬಿಟ್ಟರೆ ಬಿಡಿ!!

ಸತ್ಯಾಂಶವೇನೆಂದರೆ ನಮ್ಮ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು ಸತ್ಯವೇದದ ಮೂಲಕವೇ!

ನಮ್ಮ "**ಭಾರತ ದೇಶದ ಪಿತಾಮಹಾ**" ನಾಗಿರುವ ಮಹಾತ್ಮಗಾಂಧಿಯವರಿಗೆ ಅಧಿಕವಾಗಿ ಪ್ರಭಾವ ಬೀರಿದ ಪುಸ್ತಕವೆಂದರೆ ಅದು ಸತ್ಯವೇದವೇ ವಿಶೇಷವಾಗಿ, ಕೆಳಗಿನ ವಾಕ್ಯವು ಅವರ ಮನಸ್ಸನ್ನು ಮುಟ್ಟಿತು –

## ಮತ್ತಾಯ 5 :39

**"ಆದರೆ ನಾನು ನಿಮಗೆ ಹೇಳುವದೇನೆಂದರೆ – ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು"**

ಇದು **ಅಹಿಂಸಾ ಚಳುವಳಿ** ಗೆ ಮೂಲ ಕಾರಣವಾಯಿತು ಇದರಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು.

ಇಂದು ಸಹ ಮೇಲಿನ ವಾಕ್ಯವನ್ನು ಪಾರ್ಲಿಮೆಂಟ್ ಸಭೆಯಲ್ಲಿ ನೋಡಬಹುದು ಆದರೆ ಕೆಲವರಿಗೆ ಮಾತ್ರ

ಇದು ಸತ್ಯವೇದದಲ್ಲಿದೆ ಎಂದು ಗೊತ್ತಿದೆ ಉಳಿದವರು

ಇದು ಮಹಾತ್ಮಗಾಂಧಿಯ ವಾಕ್ಯವೆಂದು ಕೊಂಡಿದ್ದಾರೆ!!

ನಂತರ ನಾವು ಸತ್ಯವೇದ ಪುಸ್ತಕವು ಅಧಿಕವಾಗಿ ಮುದ್ರೆಯಾಗಿರುವ ಪುಸ್ತಕ ಮತ್ತು ಮೊಟ್ಟಮೊದಲು **ಕ್ರಿ.ಶ. 1454** ರಲ್ಲಿ ಮುದ್ರೆಯಾದ ಪುಸ್ತಕವೆಂದರೆ ಅದು ಸತ್ಯವೇದ ಪುಸ್ತಕವೆಂದು ನೋಡುತ್ತೇವೆ.





ಈಗ ಇಡೀ ಲೋಕದಲ್ಲಿ **2000** ಕ್ಕಿಂತಲೂ ಹೆಚ್ಚಿನ ಭಾಷೆಯಲ್ಲಿ ಮುದ್ರೆಯಾಗುತ್ತಿದೆ.

ಆದರೆ ಇವೆಲ್ಲವುಗಳೊಂದಿಗೆ –

ಬಹಳಷ್ಟು ಕ್ರೈಸ್ತರು ಸತ್ಯವೇದದಲ್ಲಿರುವ ಬಾಷೆಯನ್ನು ಮತ್ತು ಸಂಕೇತಗಳನ್ನು ಅಧಿಕವಾಗಿ ಅಪಾರ್ಥ ಮಾಡಿ ಕೊಂಡಿದ್ದಾರೆ!!

**ಹೌದು! ಸತ್ಯವೇದವು ದೇವರಿಂದ ಮನುಷ್ಯರಿಗೆ ಬಂದಂತಹ ಆತ್ಮೀಕ ಆಹಾರವಾಗಿದೆ.**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ–

## ಮತ್ತಾಯ 4 : 4, ಧರ್ಮೋಪದೇಶಕಾಂಡ 8 : 3, ಯೆರೆಮೀಯ 15 : 16

" ಆದರೆ ಆತನು ಪ್ರತ್ಯುತ್ತರವಾಗಿ--ಮನುಷ್ಯನು ರೊಟ್ಟಿ ಮಾತ್ರದಿಂದಲೇ ಜೀವಿಸುವದಿಲ್ಲ, ಆದರೆ ದೇವರ ಬಾಯೊಳಗಿಂದ ಹೊರಡುವ ಪ್ರತಿಯೊಂದು ಮಾತಿನಿಂದ ಜೀವಿಸುವನು ಎಂದು ಬರೆದದೆ ಅಂದನು."

" ಮನುಷ್ಯರು ಆಹಾರ ಮಾತ್ರದಿಂದಲ್ಲ, ಯೆಹೋವನ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುತ್ತಾರೆ............"

" ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರ ಮಾಡಿಕೊಂಡೆನು, ನಿನ್ನ ನುಡಿಗಳು ನನಗೆ ಹರ್ಷವೂ ಹೃದಯಾನಂದವೂ ಆದವು. "

ಪ್ರಾಕೃತಿಕ ಆಹಾರವು ಹೇಗೆ ಸ್ವಭಾವದಲ್ಲಿ ವ್ಯತ್ಯಾಸಗೊಂಡಿದೆ ಮತ್ತು ಪೌಷ್ಠಿಕತೆಯು ಬೆಳವಣಿಗೆಯ ವಿವಿಧ ಹಂತಗಳಿಗೆ ಹೊಂದಿಕೆಯಾಗುತ್ತದೆಯೋ ಆತ್ಮೀಕ ಆಹಾರವು ಅದೇ ರೀತಿಯಾಗಿದೆ. ಇದು ಹೇಗೆ ಎಂದು ನೀವು ಕೇಳಬಹುದು?

ಇದಕ್ಕೆ ಉತ್ತರವನ್ನು ಹೀಗೆ ಓದುತ್ತೇವೆ -

## ಇಬ್ರಿಯರಿಗೆ 5 : 12-14

" ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲಪಾಠಗಳನ್ನು ತಿರಿಗಿ ಕಲಿಸಿಕೊಡಬೇಕಾಗಿದೆ; ನೀವು ಹಾಲು ಕುಡಿಯತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನ ತಕ್ಕವರಲ್ಲ ಹಾಲು ಬೇಕಾದವನು ಕೂಸಿನಂತಿದ್ದು ನೀತಿವಾಕ್ಯದಲ್ಲಿ ಅನುಭವವಿಲ್ಲದವನಾಗಿದ್ದಾನೆ. ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ."



ಹೌದು! ಇಲ್ಲಿ ಅಪೊಸ್ತಲನಾದ ಪೌಲನು ವಿವಿಧ ಆತ್ಮೀಕ ಆಹಾರವನ್ನು ಕುರಿತು <u>ಸ್ಪಷ್ಟವಾಗಿ</u> ಹೇಳುತ್ತಾನೆ.

"**ಹಾಲು**" ಮತ್ತು "**ಗಟ್ಟಿಯಾದ ಆಹಾರ**".

ಹೇಗೆ ಮಗುವು ಬರೀ ಹಾಲನ್ನು ಕುಡಿದು ನಂತರ ಗಟ್ಟಿಯಾದ ಆಹಾರ ತೆಗೆದುಕೊಳ್ಳುತ್ತದೋ – ಹಾಗೆಯೇ ನಾವು ಸಹ ಆತ್ಮೀಕವಾಗಿ ಪ್ರಗತಿಹೊಂದಬೇಕು ಮತ್ತು ಬೆಳೆಯಬೇಕು.



ಆದರೆ ಅಪೊಸ್ತಲನಾದ ಪೌಲನು ಹೇಳುವ ಹಾಗೆ ಅನೇಕರಿಗೆ ಬೆಳವಣಿಗೆಯೇ ಇಲ್ಲ –

“ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲಪಾಠಗಳನ್ನು ತಿರಿಗಿ ಕಲಿಸಿಕೊಡಬೇಕಾಗಿದೆ............”

ಇಲ್ಲಿ "ಹಾಲು" ಎಂದರೇನು?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ–

## ಇಬ್ರಿಯರಿಗೆ 6 : 1-3

“ಆದದರಿಂದ ನಿರ್ಜೀವಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟು ಬಿಟ್ಟು ದೇವರಲ್ಲಿಯೇ ನಂಬಿಕೆಯಿಡಬೇಕಾದದ್ದು ಸ್ನಾನ ಹಸ್ತಾರ್ಪಣಗಳ ವಿಷಯವಾದ ಉಪದೇಶ, ಸತ್ತವರಿಗೆ ಪುನರುತ್ಥಾನವೂ ನಿತ್ಯವಾದ ನ್ಯಾಯತೀರ್ಪು ಉಂಟೆಂಬದು ಇವುಗಳನ್ನು ಪದೇ ಪದೇ ಅಸ್ತಿವಾರವಾಗಿ ಹಾಕದೆ ಕ್ರಿಸ್ತನ ವಿಷಯವಾದ ಪ್ರಥಮ ಬೋಧನೆಯನ್ನು ಕುರಿತು ಇನ್ನೂ ಮಾತಾಡದೆ ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗೋಣ ಮತ್ತು ದೇವರ ಚಿತ್ತವಾದರೆ ಹೀಗೆ ಸಾಗುತ್ತಾ ಹೋಗುವೆವು.”

ಹೌದು! ಎಲ್ಲಾ ಪ್ರಾಥಮಿಕ ಮೂಲಭೂತವಾದ ಬೋಧನೆಗಳು ಅಪೊಸ್ತಲನಾದ ಪೌಲನು ತಿಳಿಸಿರುವಂತೆ ದೇವರ ವಾಕ್ಯದ "**ಹಾಲು**" ಆಗಿದೆ.

ಇದನ್ನು ಆಪೊ. ಪೇತ್ರನು ಸಹ ತಿಳಿಸಿರುವದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## 1 ಪೇತ್ರನು 2 : 2

“ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ;ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ;.”

ಹೌದು! ಎಲ್ಲಾ ಆತ್ಮೀಕ ಬೆಳವಣಿಗೆಯು "ಹಾಲಿನಿಂದ" ಆರಂಭವಾಗುತ್ತದೆ. ಏಕೆಂದರೆ ಅದು ಸಾಧಾರಣವಾದ ಬೆಳವಣಿಗೆ.

ಈಗ ಸತ್ಯವೇದವನ್ನು ಹೇಗೆ ಅಭ್ಯಾಸ ಮಾಡುವುದು ಎಂಬ ಮುಖ್ಯವಾದ ಪ್ರಶ್ನೆಗೆ ಬರೋಣ.



ಈ ಪುಸ್ತಕವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟ. ಇದು ಬೀಗ ಹಾಕಿದ ಪುಸ್ತಕದಂತೆ ಕಾಣುತ್ತದೆ.

**ನಿಶ್ಚಯವಾಗಿ ಸತ್ಯವೇದದ ಬೀಗವನ್ನು ತೆರೆಯಲು ಬೀಗದ ಕೈ ಇರಲೇ ಬೇಕು!**

**ಈ ಸತ್ಯವೇದದ ಬೀಗವನ್ನು ತೆರೆಯಲು ಇರುವ ಬೀಗದ ಕೈಗಳು ಯಾವುವು?**

ಹೌದು! ನಾವು ದೇವರ ಕೃಪೆಯಿಂದ ಸತ್ಯವೇದವನ್ನು ತೆರೆಯಲು ಬೇಕಾದ ಮೂರು " **ಬಂಗಾರದ ಬೀಗದ ಕೈ**" ಗಳನ್ನು ನೋಡೋಣ.

ಇದು ದೇವರ "**ಬೀಗದ ಕೈ**" ಯಾಗಿರುವದರಿಂದ "ಬಂಗಾರವು" ದೈವೀಕತೆಯನ್ನು ಸೂಚಿಸುತ್ತದೆ.

# ಬಂಗಾರದ ಬೀಗದ ಕೈ # 1

**ಯೆಶಾಯ 28:10**

**" ಆಜ್ಞೆಯ ಮೇಲೆ ಆಜ್ಞೆ, ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ"**

**ಇಲ್ಲಿ ಕೊಟ್ಟಿರುವ ವಾಕ್ಯವು ನಿಮಗೆ ಅರ್ಥವಾಯಿತೆ?**

ಒಳ್ಳೆಯದು! ಸಾಧಾರಣವಾಗಿ ಇದರ ಉತ್ತರವು – ಇಲ್ಲ!
ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಈ ವಾಕ್ಯದ ಸನ್ನಿವೇಶವನ್ನು ಪರೀಕ್ಷಿಸಬೇಕು.

ವಾಕ್ಯ **9** - **" ಇವನು ಯಾರಿಗೆ ಜ್ಞಾನವನ್ನು ಬೋಧಿಸುತ್ತಾನೆ? ಇವನು ಯಾರಿಗೆ ಯೆಹೋವನ ಮಾತನ್ನು ತಿಳಿಯಪಡಿಸುತ್ತಾನೆ?......"**

ಹೌದು! ಈ ಸನ್ನಿವೇಶವು ಸತ್ಯವೇದದಲ್ಲಿನ ಬೋಧನೆಯನ್ನು ಹೇಗೆ ಅಭ್ಯಾಸ ಮಾಡುವುದು ಮತ್ತು ಅರ್ಥಮಾಡಿಕೊಳ್ಳುವುದು


ಎಂಬುದೇ, ಇದು ಸತ್ಯವೇದದಲ್ಲಿನ ಅಭ್ಯಾಸದ "ಮೊದಲ ಬಂಗಾರದ ಬೀಗದ ಕೈ"ಯ ವಾಕ್ಯ –

**( ಆಜ್ಞೆಯ ಮೇಲೆ ಆಜ್ಞೆ**
**ಸೂತ್ರ ಮೇಲೆ ಸೂತ್ರ )**

**ಈ ವಾಕ್ಯದ ಅರ್ಥವೇನು?**

ಇಲ್ಲಿ ಆಜ್ಞೆ ಎಂದರೆ ಬೋಧನೆ ಅಥವಾ ವಿಷಯಗಳು ಮತ್ತು "ಸೂತ್ರ"ವೆಂದರೆ ವಾಕ್ಯಗಳು.

ಸತ್ಯವೇದದ ಬೋಧನೆಗಳ (ವಿಷಯಗಳ) ಅಧ್ಯಯನಕ್ಕೆ
ಸರಿಯಾದ ವ್ಯವಸ್ಥಿತ ಕ್ರಮವಿರಬೇಕು.
ಮತ್ತು ವಿಷಯಗಳು ಸ್ವತಃ ವಾಕ್ಯಗಳ ಕ್ರಮವನ್ನು ಹೊಂದಿವೆ
(ನಿಯಮಗಳು).





ಆದರೆ ಕೊನೆಯ
ಭಾಗವನ್ನು ಗಮನಿಸಿ –
“ ಇಲ್ಲಿ ಸ್ವಲ್ಪ ಅಲ್ಲಿ
ಸ್ವಲ್ಪ ”

**ನಾವು ಅಭ್ಯಾಸ ಮಾಡಲು ಬೇಕಾದ ವಾಕ್ಯಗಳು ಸತ್ಯವೇದದಲ್ಲಿ**
ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ
**ಇರುವುದರಿಂದ ಅದು ಚದುರಿ ಹೋಗಿದೆ.**

ಇದರ ಅರ್ಥವೇನು?


ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ: ಸಾವನ್ನು ಕಾಣದೇ ಇರುವ ಮನುಷ್ಯನ ಬಗ್ಗೆ ಸತ್ಯವೇದವು ಮಾತನಾಡುತ್ತದೆ. ಅದು ನಿಮಗೆ ಗೊತ್ತೆ?

## ಆತನ ಹೆಸರು ಹನೋಕನು.



ಸತ್ಯವೇದದಲ್ಲಿ ಹನೋಕನ ಕಥೆಯನ್ನು ಮೂರು ವಾಕ್ಯಗಳಲ್ಲಿ ಮಾತ್ರ ನೋಡುತ್ತೇವೆ ಮತ್ತು ಅವೆಲ್ಲವು ಸತ್ಯವೇದದಲ್ಲಿ ಹರಡಲ್ಪಟ್ಟಿದೆ. ಮೊದಲನೆಯ ವಾಕ್ಯವನ್ನು **ಆದಿಕಾಂಡ 5:24** ನೋಡುತ್ತೇವೆ.

ನಂತರ **ಇಬ್ರಿಯರಿಗೆ 11:5** ಮತ್ತು **ಯೂದ 14** ರಲ್ಲಿ ನೋಡುತ್ತೇವೆ.




ಇದುವೇ **ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ**ದ ನಿಯಮ.

ಮತ್ತು, ಕೆಳಗಿನ ವಾಕ್ಯದಲ್ಲಿ ಏಕೆ ಎರಡು ಭಾರಿ ಹೇಳಲಾಗಿದೆ – ನಾವು ಮೊದಲೇ ನೋಡಿದ ಹಾಗೆ "ಆಜ್ಞೆ" ಬೋಧನೆಯನ್ನು ಅಥವಾ ವಿಷಯವನ್ನು ಮತ್ತು "ಸೂತ್ರ" ಎಂಬ ಪದವು ವಾಕ್ಯಗಳನ್ನು ಸೂಚಿಸುತ್ತದೆ.

ಎರಡು ಬಾರಿ ಸತ್ಯವೇದದಲ್ಲಿ ಹೇಳಲು ಕಾರಣವೇನೆಂದರೆ ಸತ್ಯವೇದದ ಅಧ್ಯಾಯನ ಮಾಡುವಾಗ ಅದರಲ್ಲಿ ದೇವರ ವಾಕ್ಯದ ಎರಡು ಭಾಗಗಳಿರಬೇಕು – ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ.

**ಆದ್ದರಿಂದ, ಸತ್ಯವೇದದಲ್ಲಿನ ವಾಕ್ಯಗಳು ಇಲ್ಲಿ ಸ್ವಲ್ಪ ಅಲ್ಲಿ ಸ್ವಲ್ಪ ಏಕಿರಬೇಕು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–

## ಯೆಶಾಯ 34 : 17

**" ಆತನೇ ಇವುಗಳಿಗೆ ಪಾಲು ಮಾಡಿಕೊಟ್ಟಿದ್ದಾನೆ, ಆತನ ಕೈಯೇ ನೂಲು ಹಾಕಿ ದೇಶವನ್ನು ಹಂಚಿದೆ; ಅದು ಇವುಗಳಿಗೆ ನಿತ್ಯಸ್ವಾಸ್ತ್ಯವಾಗುವದು, ಅವು ತಲತಲಾಂತರಕ್ಕೂ ಅಲ್ಲಿ ವಾಸಿಸುವವು "**

ಇಲ್ಲಿ "ಪಾಲು" ಎಂಬ ಪದವು ಅರ್ಥಮಾಡಿಕೊಳ್ಳಲು ವಿಚಿತ್ರವಾಗಿ (ಅಪರಿಚಿತವಾಗಿ) ಕಾಣಬಹುದು!



**ದೇವರು ತನ್ನ ಸತ್ಯವನ್ನು ಯಾವ ರೀತಿಯಲ್ಲಿ ಪಾಲುಮಾಡಬಹುದು?**

"**ಪಾಲು**" ಮಾಡುವ ರೂಢಿಯಲ್ಲಿ ಒಂದು ಕಾಗದದ ಹಾಳೆಯನ್ನು ತುಂಡು ತುಂಡಾಗಿ ಹರಿದು, ಆ ತುಂಡು ಹಾಳೆಗಳಲ್ಲಿ "**ಪಾಲು**" ಮಾಡುವವರ ಹೆಸರುಗಳನ್ನು ಬರೆಯಲಾಗುತ್ತದೆ ಮತ್ತು ಕೊನೆಯದಾಗಿ "**ಪಾಲು**" ಮಾಡಲಾಗುತ್ತದೆ!

ಇದೇ ರೀತಿ ದೇವರು ತನ್ನ ಪ್ರತಿಯೊಂದು ಬೋಧನೆಗಳನ್ನು ಮತ್ತು ದೇವರು ಸತ್ಯವನ್ನು "**ವಾಕ್ಯಗಳನ್ನಾಗಿ**" ವಿಭಾಗಿಸಿದ್ದಾನೆ ಮತ್ತು ವಿವಿಧ ವಾಕ್ಯಗಳನ್ನು **66** ಪುಸ್ತಕಗಳಲ್ಲಿ ಅಡಗಿಸಿದ್ದಾನೆ.




ಸತ್ಯ ಉಪದೇಶಗಳನ್ನು "**ತುಂಡಾಗಿ**" ಅಥವ "**ವಾಕ್ಯಗಳಾಗಿ**" ವಿಭಾಗಿಸಿದ್ದಾರೆ.

## ಇದೇ ಸತ್ಯವನ್ನು ಬೀಗ ಹಾಕುವ ದೈವೀಕ ನಿಯಮ!!

**ದೇವರು ಸತ್ಯವೇದವನ್ನು ಏಕೆ ಬೀಗ ಹಾಕಬೇಕು?**

ಏಕೆಂದರೆ ಅದು ಅತಿ ಅಮೂಲ್ಯವಾದದ್ದು ಮತ್ತು ಅದನ್ನು ಯಾರೂ ಅಗೌರವ ಪಡಿಸಬಾರದು ಮತ್ತು ದುರಪಯೋಗಪಡಿಸಬಾರದು.

ಮನುಷ್ಯನು ಸಹ ಅವನ ಬೆಲೆ ಬಾಳುವ ವಸ್ತುಗಳನ್ನು ಸುರಕ್ಷಿತವಾದ ಮತ್ತು ತಿಳಿಯಲು ಕಠಿಣವಾದ ಭದ್ರ ಕಪಾಟಿನಲ್ಲಿ (**LOCKER**) ಇಡುತ್ತಾನೆ!!

**ಹಾಗಾದರೆ ದೇವರ ಸತ್ಯಗಳು ಎಷ್ಟು ಅಮೂಲ್ಯವಾಗಿರಬೇಕು ?**

ಸತ್ಯವು "ಬೀಗ" ಹಾಕಲ್ಪಟ್ಟಿದೆ ಮತ್ತು "ಸಾಂಕೇತಿಕ" ವಾಗಿದೆಯೆಂದು ನೋಡುತ್ತೇವೆ.

**ಹಾಗಾದರೆ ಇದನ್ನು ತೆರೆಯುವುದು ಹೇಗೆ?**

ನಾವು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ಯೆಶಾಯ 34:16**

**"ಯೆಹೋವನ ಶಾಸ್ತ್ರದಲ್ಲಿ ಹುಡುಕಿ ಓದಿರಿ, ಇವುಗಳಲ್ಲಿ ಯಾವದೂ ಇಲ್ಲದಿರದು, ಎಲ್ಲವೂ ಜೊತೆಜೊತೆಯಾಗಿರುವವು; ಆತನ ಬಾಯಿಂದ ಅಪ್ಪಣೆಯಾಯಿತಲ್ಲವೆ, ಆತನ ಆತ್ಮವು ಇವುಗಳನ್ನು ಒಟ್ಟಿಗೆ ಬರಮಾಡಿತಷ್ಟೆ."**

ಹೌದು! ಇಲ್ಲಿ ಒಬ್ಬನು ದೇವರ ವಾರ್ತೆಯನ್ನು ಸತ್ಯವೇದದಲ್ಲಿನ ವಾಕ್ಯಗಳಲ್ಲಿ ಪರಿಶೋಧಿಸಬೇಕು ಮತ್ತು ಹುಡುಕಬೇಕೆಂದು ನೋಡುತ್ತೇವೆ.

## ಪ್ರತಿಯೊಂದು ವಾಕ್ಯಕ್ಕೂ ಅದರ "ಜೊತೆ"ಯಿರುತ್ತದೆ!

ಇದರ ಅರ್ಥವೇನು?

"ಜೊತೆ" (**Mate**)ಎಂದರೆ ಜೋಡಿಯನ್ನು ಸೂಚಿಸುತ್ತದೆಯೆಂದು ನಮಗೆ ಗೊತ್ತಿದೆ. ಆದ್ದರಿಂದ "ಗಂಡು" ಮತ್ತು "ಹೆಣ್ಣು" ಒಂದು ಜೋಡಿ. ವಿದ್ಯುತ್ ತಂತಿಯಲ್ಲೂ "ಧನ" (**Positive**) ಮತ್ತು "ಋಣ" (**Negative**) ತಂತಿಗಳೆಂಬ ಜೋಡಿಗಳಿವೆ.

ಆದರೆ ಇಲ್ಲಿ "ಜೋಡಿ" ಎಂಬುದು ಯಾವುದನ್ನು ಸೂಚಿಸುತ್ತದೆ?

ಇದು ಪ್ರತಿಯೊಂದು ವಾಕ್ಯದ ಪ್ರಶ್ನೆಗೂ (ಅನುರೂಪವಾದ) ಸರಿಬೀಳುವ ಉತ್ತರ ವಾಕ್ಯದಲ್ಲಿ ಸಿಗುತ್ತದೆ ಎಂದು ಸೂಚಿಸುತ್ತದೆ!

ಪ್ರತಿಯೊಂದು ಪ್ರಶ್ನೆಗೂ ಸತ್ಯವೇದದಲ್ಲಿ ಉತ್ತರವಿದೆ!

ಆದರೆ, ಅವುಗಳನ್ನು "**ಒಟ್ಟಿಗೆ**" ಮಾಡಲು ಅಥವಾ ಹುಡುಕಲು ಮತ್ತು ಜೊತೆ ಮಾಡಲು ಒಬ್ಬನಿಗೆ ದೇವರ ಆತ್ಮವು ಬೇಕು. (**ಯೋಹಾನ 16:13**)

ಆದ್ದರಿಂದ, **66** ಪುಸ್ತಕದಲ್ಲಿ ಚದುರಿರುವ ಸತ್ಯವೇದದ ವಾಕ್ಯಗಳನ್ನು ಮತ್ತು ಅದರ ವಿಷಯಗಳನ್ನು ಕ್ರಮಾನುಸಾರವಾಗಿ ಅಭ್ಯಾಸಿಸಬೇಕು.

ಸತ್ಯವೇದವನ್ನು ಅಧ್ಯಾಯನ ಮಾಡಲು ಬೇಕಾದ ಎರಡನೆಯ "ಬಂಗಾರದ ಬೀಗದಕ್ಕೆ"ಯನ್ನು ನೋಡುವದಕ್ಕೆ ಮುಂಚೆ, ಒಂದು ಕುತೂಹಲವುಳ್ಳ ಕಾರ್ಯವನ್ನು ಮತ್ತು ಅದರ ಅರ್ಥವನ್ನು ಅಭ್ಯಾಸ ಮಾಡೋಣ–

## ಯೆಶಾಯ 28:10,13

(ಪೂರ್ತಿಯಾಗಿ ಓದಿ)

ಇವೆರಡರಲ್ಲಿರುವ ಭಾಷೆಯನ್ನು ಗಮನಿಸಿ ಮತ್ತು ಎರಡೂ ವಾಕ್ಯದಲ್ಲಿರುವ ದೊಡ್ಡ ವ್ಯತ್ಯಾಸವನ್ನು ಗಮನಿಸಿ!

ಅವುಗಳ ಅರ್ಥವೇನು?

**ಅವು ಎರಡು ವಿಧವಾದ ಸತ್ಯವೇದದ ಅಧ್ಯಾಯನಗಳನ್ನು ಕುರಿತು ಮಾತನಾಡುತ್ತದೆ!!**

ನಾವು ಮುಂದೆ ಹೀಗೆ ಓದುತ್ತೇವೆ–

**ಯೆಶಾಯ 28:10**

"ಆಜ್ಞೆಯ ಮೇಲೆ ಆಜ್ಞೆ, ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ"

ಈ ವಿಧವಾದ ಸತ್ಯವೇದದ ಅಭ್ಯಾಸವು ನಿಮ್ಮನ್ನು ಸತ್ಯದ ಜ್ಞಾನವನ್ನು ತಿಳಿದುಕೊಳ್ಳಲು ಅಥವಾ ಪಡೆದುಕೊಳ್ಳಲು ಕೊಂಡೊಯ್ಯುತ್ತದೆ.

ಮತ್ತು ಇನ್ನೊಂದು ವಾಕ್ಯವನ್ನು ಮುಂದೆ ಓದುತ್ತೇವೆ–

**ಯೆಶಾಯ 28:13**

"ಹೀಗಿರಲು ಯೆಹೋವನ ಮಾತು ಆಜ್ಞೆಯ ಮೇಲೆ ಆಜ್ಞೆ, ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ, ಎಂಬದಾಗಿ ಇವರಿಗೆ ಪರಿಣಮಿಸುವದು; ಇವರು ನಡೆದು ಹಿಂದೆಬಿದ್ದು ಭಂಗ ಪಡುವರು, ಬೋನಿಗೆ ಸಿಕ್ಕಿ ವಶವಾಗುವರು."

**ಬಾಷೆ ಮತ್ತು ಅದರ ಅರ್ಥಗಳನ್ನು ಗಮನಿಸಿ!**

ಈ ವಿಧವಾದ ಸತ್ಯವೇದದ ಅಭ್ಯಾಸವು ನಿಮ್ಮನ್ನು ಸತ್ಯದ ಜ್ಞಾನದಿಂದ ಹಿಂದಕ್ಕೆ ಕೊಂಡೊಯ್ಯುತ್ತದೆ.

ಅಥವಾ ಸತ್ಯದ ಮಾರ್ಗದಿಂದ ಒಬ್ಬನನ್ನು ತಪ್ಪಿಸಿಕೊಳ್ಳುವಂತೆ ಮಾಡುತ್ತದೆ!

"ಇವರು ನಡೆದು ಹಿಂದೆಬಿದ್ದು ಭಂಗ ಪಡುವರು, ಬೋನಿಗೆ ವಶವಾಗುವರು –"



ಇದು ತಪ್ಪಾದ ಬೋಧನೆ ಮತ್ತು ಅಪಾರ್ಥದಲ್ಲಿರುವ ತಪ್ಪುಗಳಲ್ಲಿ ಸಿಕ್ಕಿಕೊಳ್ಳುವದನ್ನು ಸೂಚಿಸುತ್ತದೆ!

## ನಂತರ ನಮ್ಮಲ್ಲಿ ಏಳುವ ಪ್ರಶ್ನೆ - ಸತ್ಯವು ಯಾವುದು ಎಂದು ನಮಗೆ ಹೇಗೆ ಗೊತ್ತಾಗುತ್ತದೆ ?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ–

**ಯೋಹಾನ 17:17**

**“ ....ನಿನ್ನ ವಾಕ್ಯವೇ ಸತ್ಯವು”**

ಈ ಮುಖ್ಯವಾದ ವಿಷಯವನ್ನು ತಿಳಿದುಕೊಂಡ ನಂತರ,

ಒಬ್ಬನಿಗೆ ಇದುವೇ ಸರಿಯಾದ ಸತ್ಯವೇದದ ಅಭ್ಯಾಸವೆಂದು ಹೇಗೆ ಗೊತ್ತಾಗುತ್ತದೆ?!

ಹೌದು! – ಉಪದೇಶದ ನಂಬಿಕೆಯ ಬೋಧನೆಯನ್ನು ಪರೀಕ್ಷಿಸಬೇಕು!

ಹೌದು! ಸತ್ಯವೇದಕ್ಕೆ ಅನುಸಾರವಾಗಿ ಬೋಧಿಸುತ್ತಾರೆಯೇ?

**ಆತ್ಮವು ನರಕದಲ್ಲಿ ಸಾಯುತ್ತದೆಯೆ?**

ಎಂಬ ಪ್ರಶ್ನೆಗೆ ಸತ್ಯವೇದದಲ್ಲಿ ಪರೀಕ್ಷಿಸಿ ನೋಡೋಣ

ಇದಕ್ಕೆ ಅನೇಕರ ಉತ್ತರ ಏನೆಂದರೆ – ಇಲ್ಲ !

ಆದರೆ ನಾವು ಆತ್ಮವು ನರಕದಲ್ಲಿ ಸಾಯುತ್ತದೆ ಎಂದು ಭೋದಿಸುತ್ತೇವೆ ! ಏಕೆ???

ಏಕೆಂದರೆ (ಕೆ.ಜೆ.ವಿ) ಯಲ್ಲಿ ನಾವು ಹೀಗೆ ಓದುತ್ತೇವೆ–

**ಮತ್ತಾಯ 10:28**

**“ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ, ಆತ್ಮ ದೇಹ ಎರಡನ್ನೂ ಕೂಡ ನರಕದಲಿ ಹಾಕಿ ನಾಶಮಾಡಬಲ್ಲಾತನಿಗೇ ಹೆದರಿರಿ.”**

## ನೀವು ನೋಡಿದಿರಾ??!

ಸತ್ಯವೇದವು ನಮಗೆ ಏನು ಭೋಧಿಸುತ್ತದೆ ಎಂದರೆ.....

ಆತ್ಮವು ನರಕದಲಿ ಸಾಯಬಲ್ಲದು ಮತ್ತು ಇದಲ್ಲದೆ...... ಶರೀರಕೂಡ ನರಕಕ್ಕೆ ಹೋಗುತ್ತದೆ .

**ನಿಮಗೆ ಆಶ್ಚರ್ಯವಾಗಿದೆಯೇ???**

ಆಹಾ! ಮುಂದಿನ ತರಗತಿಗಳಲ್ಲಿ ನಾವು ಮನುಷ್ಯನ ಆತ್ಮವನ್ನು ಮತ್ತು ನರಕವನ್ನು ಕುರಿತು ವಿವರವಾಗಿ ಅಭ್ಯಾಸ ಮಾಡಲ್ಲಿದ್ದೇವೆ.

ಆದ್ದರಿಂದ ಯಾವಾಗಲೂ ಸತ್ಯವೇದದ ತರಗತಿಯಲ್ಲಿ ಕಲಿತು ಕೊಳ್ಳುವದನೆಲ್ಲಾ,



ಸತ್ಯವೇದಕ್ಕೆ ಅನುಗುಣವಾಗಿದೆಯೇ ಮತ್ತು ಈ ನಂಬಿಕೆಗೆ ಆಧಾರವಾಕ್ಯವಿದೆಯೆ ಎಂದು ಯಾವಾಗಲು ಪರೀಕ್ಷಿಸಿ ನೋಡಿ. ಏಕೆಂದರೆ ಸತ್ಯವೇದವು ನಮಗೆ ತಪ್ಪಾದ ಭೋಧನೆಯನ್ನು ಮತ್ತು ತಪ್ಪಾದ ಸತ್ಯವೇದ ಅಭ್ಯಾಸಗಳನ್ನು ಕುರಿತು ಎಚ್ಚರಿಸುತ್ತದೆ

ಈಗ ಸತ್ಯವೇದ ಅಭ್ಯಾಸದ ಎರಡನೆಯ "ಬಂಗಾರದ ಬೀಗದ ಕೈ" ಯನ್ನು ನೋಡೋಣ –

# ಬಂಗಾರದ ಬೀಗದ ಕೈ # 2

**2 ತಿಮೊಥೆಯನಿಗೆ 2:15**

"ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸ ಪಡು ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು."

**ಇದರ ಅರ್ಥವೇನು?**

ಇಲ್ಲಿ ಒಂದು ರಹಸ್ಯ ಅಡಗಿದೆ! ನಮಗೆ ಗೊತ್ತಿರುವ ಹಾಗೆ ಮನುಕುಲದ ಭಾಷೆಯಲ್ಲಿ ವಿವಿಧ ಭಾಷೆಗಳಿವೆ–

.....ಕಾವ್ಯರಚನೆ, ನಾಟಕ, ಗದ್ಯವಚನ ಇತರೆ

ಅದೇ ರೀತಿ ಸತ್ಯವೇದವನ್ನು ಅಭ್ಯಾಸಮಾಡುವಾಗ ಅದರಲ್ಲಿರುವ ಭಾಷೆಯನ್ನು ಗುರುತಿಸಲು ನಾವು ಎಚ್ಚರಿಕೆಯಿಂದಿರಬೇಕು.

ಮೊದಲನೆಯ ಭಾಷೆ ಉಪಯೋಗಿಸಿರುವದು ಯಾವುದೆಂದರೆ –

## 1. ನೇರವಾದ (ವಾಸ್ತವವಾದ) ಭಾಷೆ

ಉದಾಹರಣೆಗೆ: **ಮತ್ತಾಯ 1:21 / ಆದಿಕಾಂಡ 1:1**

" ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು. ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವವನು ಅಂದನು.".





"ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನು ಉಂಟು ಮಾಡಿದನು."

ಸತ್ಯವೇದದಲ್ಲಿನ ಅನೇಕ ವಾಕ್ಯವು ನೇರವಾಗಿ ಅರ್ಥಮಾಡಿಕೊಳ್ಳುವಂತಹ ಅಕ್ಷರಾರ್ಥ (**Literal**) ಭಾಷೆಯಲ್ಲಿದೆ.

ಇದನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುವುದಿಲ್ಲ.

**ಆದರೆ ನಾವು ನೆನಪಿನಲ್ಲಿಡ ಬೇಕಾದದ್ದೆಂದರೆ ಇಡೀ ಸತ್ಯವೇದ ಪುಸ್ತಕ ನೇರವಾದ ಭಾಷೆಯಲ್ಲಿ ಮಾತ್ರ ಬರೆದಿಲ್ಲ !!**

ಹೌದು! ಇಲ್ಲಿ ಉಪಯೋಗಿಸಿರುವ ಎರಡನೆಯ ವಿಧವಾದ ಭಾಷೆ ಯಾವುದೆಂದರೆ –

## 2. ಸಾಮ್ಯರೂಪ ಭಾಷೆ

ಇವುಗಳು ಸಣ್ಣ ವಾಕ್ಯಗಳು ಅಥವಾ "ಸಣ್ಣ ಕಥೆಗಳು" ಇವುಗಳನ್ನು ನೇರವಾಗಿ ತೆಗೆದುಕೊಳ್ಳದೆ ಆತ್ಮೀಕವಾಗಿ ತೆಗೆದುಕೊಳ್ಳಬೇಕು – ಅಂದರೆ ಅವುಗಳಲ್ಲಿ ಆತ್ಮೀಕವಾದ ಅರ್ಥವಿರುತ್ತದೆ

ಈಗ ಸಾಮ್ಯರೂಪ ಭಾಷೆಯ ಉದಾಹರಣೆಯನ್ನು ಪರೀಕ್ಷಿಸಿ ನೋಡೋಣ.

ಈ ವಿಷಯವನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲು ಕೆಳಗೆ ದಾಖಲಾಗಿರುವ ಹೆಸರಾಂತ ಸಾಮ್ಯವನ್ನು ಓದೋಣ.

### ಲೂಕ 15:3-7

(ಪೂರ್ತಿಯಾಗಿ ಓದಿ)

(ಕಳೆದು ಹೋದ ಕುರಿಯನ್ನು ಕುರಿತ ಸಾಮ್ಯ)

"ಆಗ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು. ಅದೇನಂದರೆ ನಿಮ್ಮೊಳಗೆ ಯಾವ ಮನುಷ್ಯನಾದರೂ ತಮಗೆ ನೂರು ಕುರಿಗಳಿರಲಾಗಿ ಅವುಗಳಲ್ಲಿ ಒಂದು ಕಳೆದು ಹೋದರೆ ಅವನು ತೊಂಭತ್ತೊಂಭತ್ತನ್ನು ಅಡವಿಯಲ್ಲಿ ಬಿಟ್ಟು ಕಳೆದು ಹೋದದ್ದು ಸಿಕ್ಕುವ ತನಕ ಅದನ್ನು ಹುಡುಕಿಕೊಂಡು ಹೋಗದೆ ಇದ್ದಾನೆ? ಸಿಕ್ಕಿದ ಮೇಲೆ ಆತನು ಸಂತೋಷಪಡುತ್ತಾ ಅದನ್ನು ತನ್ನ ಹೆಗಲಿನ ಮೇಲೆ ಇಟ್ಟುಕೊಂಡು ಮನೆಗೆ ಬಂದು ಸ್ನೇಹಿತರನ್ನೂ ನೆರೆಹೊರೆಯವರನ್ನೂ ಕೂಡಿಸಿ – ಕಳೆದು ಹೋಗಿದ್ದ ಕುರಿ ಸಿಕ್ಕಿತು, ನನ್ನ ಸಂಗಡ ಸಂತೋಷಿಸಿರಿ ಎಂದು ಅವರಿಗೆ ಹೇಳುವವನಲ್ಲವೆ. ಅದರಂತೆ ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವಶ್ಯವಿಲ್ಲದ ತೊಂಭತ್ತೊಂಭತ್ತು ಮಂದಿ ನೀತಿವಂತರಿಗಿಂತ ದೇವರ ಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುವದೆಂದು ನಿಮಗೆ ಹೇಳುತ್ತೇನೆ."

ಇದು ಬಹಳ ಪ್ರಸಿದ್ಧವಾದ ಸಾಮ್ಯ ಮತ್ತು ಒಬ್ಬನು ಹೊಸದಾಗಿ ಕ್ರೈಸ್ತ ಮತಕ್ಕೆ ಸೇರಿ ದೀಕ್ಷಾಸ್ನಾನ ಹೊಂದುವ ಸಮಯದಲ್ಲಿ ಈ ವಾಕ್ಯವನ್ನು ಓದುತ್ತಾರೆ.

ಏಕೆಂದರೆ ಇಂಥವನೇ "ಕಳೆದು ಹೋದ ಕುರಿ" ಎಂದು ಎಣಿಸಲಾಗಿದೆ.

ಅನೇಕರು ಈ ವಾಕ್ಯಗಳಲ್ಲಿನ 7 ನೇ ವಾಕ್ಯವು ವ್ಯಕ್ತಿಗತವಾದ ಪಾಪಿಗಳನ್ನು

ಅವರ ಪಶ್ಚಾತ್ತಾಪವನ್ನು ಮತ್ತು ಅವರು ದೇವರಕಡೆಗೆ ತಿರುಗಿಕೊಳ್ಳುವುದನ್ನು ಸೂಚಿಸುತ್ತದೆ ಅಂದು ಕೊಂಡಿದ್ದಾರೆ.

ಆದರೆ ಈ ವಾಕ್ಯವನ್ನು ಎಚ್ಚರಿಕೆಯಿಂದ ಪರೀಕ್ಷಿಸೋಣ –

ಇದು ವ್ಯಕ್ತಿಗತವಾದ ಪಾಪಿಗಳನ್ನು ಸೂಚಿಸಿದರೆ,

ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವಶ್ಯವಿಲ್ಲದ ತೊಂಭತ್ತೊಂಭತ್ತು

**ಮಂದಿ ನೀತಿವಂತರು ಯಾರು?**

**ಈ ಲೋಕದಲ್ಲಿ ಅಷ್ಟೊಂದು ಜನ "ನೀತಿವಂತ"ರಿದ್ದಾರೆಯೇ?**

ಕೆಳಗಿನ ವಾಕ್ಯದಲ್ಲಿ ಓದೋಣ–

**ರೋಮಾಪುರದವರಿಗೆ 3:10**

"ಇದು ಶಾಸ್ತ್ರದಲ್ಲಿ ಬರೆದಿರುವ ಮಾತುಗಳಿಗೆ ಸರಿಯಾಗಿದೆ; ಅವು ಯಾವವಂದರೆ ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ;"

ಎಲ್ಲಾ ಮನುಕುಲದ ಸ್ಥಿತಿಯು ಬಹಳ ಸ್ಪಷ್ಟವಾಗಿದೆ!

**ಹಾಗಾದರೆ ಈ 99 ಮಂದಿ "ನೀತಿವಂತರು" ಯಾರು?**

ಇದು ವ್ಯಕ್ತಿಗತವಾದ ಪಾಪಿಗಳನ್ನು ಸೂಚಿಸದೆ, ಸಾಮ್ಯ ರೂಪವನ್ನು ಸೂಚಿಸುತ್ತದೆ!

ಈಗ ಇದರ ಅರ್ಥವನ್ನು ನೋಡೋಣ –

ಇಲ್ಲಿ ಯೇಸು (ಯಾರೋ) ಒಬ್ಬ ಮನುಷ್ಯನಿಗೆ 100 ಕುರಿಗಳಿರುವುದಾಗಿ ಹೇಳುತ್ತಾರೆ.

ಆಗಿನ ಕಾಲದಲ್ಲಿ ಸಂಪತ್ತನ್ನು ಕುರಿ, ದನ, ಒಂಟೆಗಳ ಮೂಲಕ ಲೆಕ್ಕಿಸಲಾಗುತ್ತಿತ್ತು.

ಉದಾಹರಣೆಗೆ: ಅಬ್ರಹಾಮ, ಯೋಬನು ಇತರೆ.



ಇಲ್ಲಿ ಬರುವ ಚಿತ್ರವು ಎಲ್ಲಾ ಸೃಷ್ಟಿಗೆ ಕಾರಣನೂ ಯಜಮಾನನೂ ಆದ ದೇವರನ್ನು ಕುರಿತು ಹೇಳುತ್ತದೆ ದೇವರನ್ನು "ಮಹಾ ಕುರುಬ" ನೆಂದು ಸಹ ಸೂಚಿಸುತ್ತದೆ. ಕೀರ್ತನೆಗಳು 23:1.

## ದೇವರ ಕುರಿಗಳು ಯಾರು?

ಕುರಿ → ವಿಧವಿಧವಾದ ದೇವರ ಸೃಷ್ಟಿಯನ್ನು ಸೂಚಿಸುತ್ತದೆ.

100 ಸಂಖ್ಯೆ → ದೇವರು ಸೃಷ್ಟಿಸಿದ ವಿಧವಿಧವಾದ ಜಾತಿಯನ್ನು ಸೂಚಿಸುತ್ತದೆ.

ಪ್ರಾಣಿಗಳು, ಪಕ್ಷಿಗಳು, ಮೀನುಗಳು, ಕ್ರಿಮಿಕೀಟಗಳು, ಗಿಡಮರಗಳು, ದೇವದೂತರು, ಕೆರೂಬಿಯರು, ಮನುಷ್ಯರು ಇತರೆ.

100 ಸಂಖ್ಯೆಯು ಎಲ್ಲಾ ಜೀವಿಗಳ ಪೂರ್ಣತೆಯನ್ನು ಸೂಚಿಸುತ್ತದೆ.

ಈಗ ದೇವರ ಎಲ್ಲಾ ಸೃಷ್ಟಿಗಳಲ್ಲಿ



ಒಂದೇ ಒಂದು "ಕುರಿ" ಅಥವಾ ಜಾತಿ "ಕಳೆದು"ಹೋಯಿತು ಮತ್ತು ಆ ಜಾತಿಯೇ ಮನುಷ್ಯ ಜಾತಿ.

.....ಎಲ್ಲಾ ಸೃಷ್ಟಿಗಳನ್ನು 100 ಸಂಖ್ಯೆಗೆ ಹೋಲಿಸಲಾಗಿದೆ!



ಎಲ್ಲಾ ಮನುಷ್ಯರು ಪಾಪಿಗಳಾಗಿ ಕಳೆದು ಹೋದರು ಮತ್ತು ಆ ಪಾಪದ ಸಂಬಳ – ಮರಣ! (ರೋಮಾಪುರದವರಿಗೆ 6:23)

**ನಂತರ ದೇವರು ಏನು ಮಾಡಿದನು?**

ಹೌದು! ದೇವರು ತನ್ನ ಒಬ್ಬನೇ ಮಗನಾದ ಯೇಸುವನ್ನು "**ಕಳೆದುಹೋದ ಕುರಿ**" ಯನ್ನು ಅಂದರೆ ಕಳೆದು ಹೋದ ಮನುಷ್ಯ ಜಾತಿಯನ್ನು ಹುಡುಕಲು ಕಳುಹಿಸದನು ಎಂಬುದಾಗಿ ಓದುತ್ತೇವೆ.

ಯೋಹಾನ 3:16 → **"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು."**

ಹೌದು! ನಾವು ಮುಂದಿನ ತರಗತಿಗಳಲ್ಲಿ ಇಡೀ ಮನುಷ್ಯಜಾತಿಯ ರಕ್ಷಣೆಗಾಗಿ ದೇವರು ಮಾಡಿರುವ ಮಹಾ ಯೋಜನೆಯನ್ನು ಕುರಿತು ಅಭ್ಯಾಸ ಮಾಡಲಿದ್ದೇವೆ.

ಹೌದು! ಮತ್ತು ಕೊನೆಯಲ್ಲಿ........ಮನುಷ್ಯ ಜಾತಿಯು ಪಾಪದ ದಂಡನೆ ಮತ್ತು ಮರಣದಿಂದ ಬಿಡುಗಡೆಯಾದಾಗ ಪರಲೋಕದಲ್ಲಿ ಮಹಾ ಸಂತೋಷ ಉಂಟಾಗುವದು ಮತ್ತು ನಿತ್ಯಜೀವವು ಕೊಡಲ್ಪಡುವದು.

ಈ ಸಾಮ್ಯದಲ್ಲಿ ಅರ್ಥಮಾಡಿಕೊಳ್ಳಲು ಇನ್ನೂ ಅನೇಕ ಕಾರ್ಯಗಳಿವೆ ಇದನ್ನು ವಿವರವಾಗಿ ಮುಂದೆ ಅಭ್ಯಾಸ ಮಾಡಲಿದ್ದೇವೆ.

ಆದರೆ ಇದು ಸಾಮ್ಯರೂಪ ಭಾಷೆಯನ್ನು ಅರ್ಥಮಾಡಿಕೊಳ್ಳುವ ಒಂದು ಉದಾಹರಣೆ!!

ಈಗ ಉಪಯೋಗಿಸಿರುವ ಮೂರನೇ ವಿಧವಾದ ಭಾಷೆಯನ್ನು ಕುರಿತು ನೋಡೋಣ-

# 3. ಸಾಂಕೇತಿಕ ಬಾಷೆ

ಈ ವಿಧವಾದ ಭಾಷೆಯಲ್ಲಿ ಸಂಕೇತ ಅಥವಾ ಚಿಹ್ನೆಯನ್ನು ಮಹಾ ಪ್ರವಾದನೆಗಳು ಹಾಗೂ ಇತರೆ ವಿಷಯವನ್ನು ಗುಟ್ಟಾಗಿಡಲು ಉಪಯೋಗಿಸಲಾಗಿದೆ.

ಪ್ರಕಟಣೆಯ ಪುಸ್ತಕವು ಪೂರ್ತಿಯಾಗಿ ಸಂಕೇತ ಅಥವಾ ಚಿಹ್ನೆಯ ಭಾಷೆಯಲ್ಲಿದೆ

ಪ್ರಕಟಣೆ 1:1 -"ಆತನು ತನ್ನ ದೂತನನ್ನು ಕಳುಹಿಸಿ ಅವನ ಮೂಲಕ ಆ ಸಂಗತಿಗಳನ್ನು ತನ್ನ ದಾಸನಾದ ಯೋಹಾನನಿಗೆ ಸೂಚಿಸಿದನು–" (ಕೆ.ಜೆ.ವಿ.)

ಈ ವಿಧವಾದ ಭಾಷೆಯು ಸತ್ಯವೇದದ ಇನ್ನಿತರ ಪುಸ್ತಕಗಳಾದ ಯೆಹೆಜ್ಕೇಲನು, ದಾನಿಯೇಲನು, ಮುಂತಾದವುಗಳಲ್ಲಿ ಬಳಸಲಾಗಿದೆ ಎಂದು ನೋಡಬಹುದು.

ನಮ್ಮ ಸುತ್ತಲಿರುವ ಗಾಳಿ, ನೀರು, ಗುಡ್ಡ, ಬೆಟ್ಟ, ಊರು, ಮೋಡ, ಮರಗಳು, ಹುಲ್ಲು, ಬೆಂಕಿ ಇತ್ಯಾದಿಗಳನ್ನು ಸಾಂಕೇತಿಕವಾಗಿ ಉಪಯೋಗಿಸಲಾಗಿದೆ.
ಮತ್ತು ಪ್ರತಿಯೊಂದಕ್ಕೂ ಅದರ ಅರ್ಥಗಳನ್ನು ಸತ್ಯವೇದದಲ್ಲೇ ನೋಡಬಹುದು!

ಉದಾಹರಣೆ: **ಮತ್ತಾಯನು 16:6** - **"ಹುಳಿ ಹಿಟ್ಟು"**

ಇದರ ಅರ್ಥವೇನು? ಮುಂದೆ ನೋಡೋಣ –

**ಮತ್ತಾಯ 16:12**

" ಆಗ ಅವರು ರೊಟ್ಟಿಯ ಹುಳಿ ಹಿಟ್ಟನ್ನು ಕುರಿತು ಎಚ್ಚರಿಕೆಯಾಗಿರಬೇಕೆಂದು ಆತನು ತಮಗೆ ಹೇಳಲಿಲ್ಲ, ಪರಿಸಾಯರ ಮತ್ತು ಸದ್ದುಕಾಯರ ಬೋಧನೆಯನ್ನು ಕುರಿತು ಎಚ್ಚರಿಕೆಯಾಗಿರಬೇಕೆಂದು ಹೇಳಿದನು ಎಂಬದಾಗಿ ತಿಳುಕೊಂಡರು."





ಹೌದು! ಪರಿಸಾಯರ ಮತ್ತು ಸದ್ದುಕಾಯರ ಬೋಧನೆಯು ವಂಚಿಸುವ ಬೊಧನೆಯಾಗಿತ್ತು.

ಅಪೊಸ್ತಲರ ಕೃತ್ಯ 23:8 -"ಯಾಕೆಂದರೆ - ಸತ್ತವರು ಎದ್ದು ಬರುವುದಿಲ್ಲವೆಂತಲೂ ದೇವದೂತನಾಗಲಿ ದೇಹವಿಲ್ಲದ ಆತ್ಮವಾಗಲಿ ಇಲ್ಲವೆಂತಲೂ ಸದ್ದುಕಾಯರು ಹೇಳುವರು; ಆ ಎರಡೂ ಉಂಟೆಂದು ಫರಿಸಾಯರು ಒಪ್ಪಿಕೊಳ್ಳುವರು."

**ಆದ್ದರಿಂದ "ಹುಳಿಹಿಟ್ಟು" ಎಂಬದು ಕರ್ತನು ಹೇಳುವ ಹಾಗೆ ವಂಚಿಸುವ ಬೋಧನೆಗಳು ಮತ್ತು ವಂಚಿಸುವ ಉಪದೇಶಗಳು.**

ಈಗ ನಾವು ಸಾಂಕೇತಿಕ ಭಾಷೆಯ ಒಂದು ಪೂರ್ತಿ ವಾಕ್ಯವನ್ನು ಅಭ್ಯಾಸ ಮಾಡೋಣ

ಪ್ರಸಂಗಿ 11:1

"ನಿನ್ನ ಆಹಾರವನ್ನು ನೀರಿನ ಮೇಲೆ ಚೆಲ್ಲು , ಬಹು ದಿನದ ಮೇಲೆ ಅದು ನಿನಗೆ ಸಿಕ್ಕುವದು."

**ಇದನ್ನು ನೇರವಾದ ಭಾಷೆಯಲ್ಲಿ ಅರ್ಥಮಾಡಿ ಕೊಳ್ಳಬೇಕೇ ?**

ನೀವು ಆಹಾರವನ್ನು ನೀರಿನಲ್ಲಿ ಚೆಲ್ಲಿದಾಗ ಸ್ವಲ್ಪವೂ ಉಳಿಯದೆ ಕರಗಿ ಹೋಗುತ್ತದೆ.

**ಬಹುದಿನದ ಮೇಲೆ** - ಅದು ಹೇಗೆ ಸಿಗುತ್ತದೆ?

**ಹೌದು! ಇದು ಸಾಂಕೇತಿಕ ಭಾಷೆ !!**

ಇಲ್ಲಿ ಉಪಯೋಗಿಸಿರುವ ಮೂರು ಸಂಕೇತಗಳು ಯಾವುವೆಂದರೆ:

1. ಆಹಾರ 2. ನೀರು 3. ಬಹು ದಿನದ ಮೇಲೆ.

ಈಗ ಇವುಗಳ ಅರ್ಥಗಳನ್ನು ನೋಡೋಣ –

**ಆಹಾರ** → ಎಂದರೆ ದೇವರ ವಾಕ್ಯ – ಇದು ನಮಗೆ "ಆತ್ಮೀಕ" ಆಹಾರ (ಯೆರೆಮೀಯ 15:16 / ಮತ್ತಾಯ 4:4)

**ನೀರು** → ಎಂದರೆ ಲೋಕದಲ್ಲಿರುವ ಪ್ರಜೆ, ಸಮೂಹ, ಜನ ಭಾಷೆಗಳನ್ನು ಸೂಚಿಸುತ್ತದೆ. (ಪ್ರಕಟನೆ 17:15)

**ಬಹು ದಿನದ ಮೇಲೆ** → ಎಂದರೆ ಈ ಭೂಮಿಯ ಮೇಲೆ ದೇವರ ರಾಜ್ಯದ ಆಳ್ವಿಕೆಯ ಕಾಲವನ್ನು ಸೂಚಿಸುತ್ತದೆ

ಈ ಕಾಲದಲ್ಲಿಯೇ ಎಲ್ಲಾ ಜನರು ಪಶ್ಚಾತ್ತಾಪ ಪಟ್ಟು ದೇವರ ಕಡೆಗೆ ತಿರುಗಿ ಕೊಳ್ಳುತ್ತಾರೆ. ಇದನ್ನು ಕುರಿತು ಓದೋಣ –

**ಕೀರ್ತನೆಗಳು 22:27,28**

**“ ಭೂಮಂಡಲದವರೆಲ್ಲರು ಎಚ್ಚರಗೊಂಡು ಯೆಹೋವನರುಕಡೆಗೆ ತಿರುಗಿಕೊಳ್ಳುವರು; [ಯೆಹೋವನೇ,] ಎಲ್ಲಾ ಜನಾಂಗಗಳವರು ನಿನಗೆ ಅಡ್ಡಬೀಳುವರು. ರಾಜ್ಯವು ಯೆಹೋವನದೇ; ಎಲ್ಲಾ ಜನಾಂಗಗಳಿಗೂ ಆತನೇ ಒಡೆಯನು.”**

ಆದ್ದರಿಂದ ಮೇಲಿನ ವಾಕ್ಯವು ತಿಳಿಸುವುದೇನೆಂದರೆ, ನಾವು ಜನರ ಮುಂದೆ ಸತ್ಯವನ್ನು ಸಾರಬೇಕು, ಈಗ ಯಾವ ಫಲಿತಾಂಶವನ್ನು ಎದುರು ನೋಡಬಾರದು ಭವಿಷ್ಯದಲ್ಲಿ ಅದರ ಫಲಿತಾಂಶವನ್ನು ಎದುರು ನೋಡಬೇಕು ಎಂಬದೇ .

**ಸತ್ಯವನ್ನು ತಿಳಿದುಕೊಳ್ಳಲು ಪ್ರತಿಯೊಬ್ಬರೂ ಸಹ ದೇವರ ವಾಕ್ಯಗಳನ್ನು ಸರಿಯಾಗಿ ವಿಭಾಗಿಸಬೇಕು ಅಥವ ಅಲ್ಲಿ ಉಪಯೋಗಿಸಲ್ಪಟ್ಟಿರುವ ಭಾಷೆಯ ವಿಧಾನವನ್ನು ಸರಿಯಾಗಿ ಗುರುತಿಸಿ ಅರ್ಥಮಾಡಿಕೊಳ್ಳಬೇಕು.**

ಒಂದು ವೇಳೆ ಸಾಂಕೇತಿಕ ಬಾಷೆಯನ್ನು ಉಪಯೋಗಿಸಿದ್ದರೆ ಅದನ್ನು ನೇರವಾದ ಭಾಷೆಯಲ್ಲಿ ತೆಗೆದುಕೊಳ್ಳಬಾರದು

ಮತ್ತು ಅದು ನೇರವಾದ ಭಾಷೆಯಲ್ಲಿದ್ದರೆ ಅದನ್ನು ಸಾಮ್ಯರೂಪ ಭಾಷೆಯಲ್ಲಿ ತೆಗೆದುಕೊಳ್ಳಬಾರದು

ಈಗ ನಾವು ಮೂರನೆ **“ಬಂಗಾರದ ಬೀಗದ ಕೈ”** ಯನ್ನು ನೋಡೋಣ–




ಸತ್ಯವೇದದ ಅಭ್ಯಾಸಕ್ಕೆ ಮೂರನೆಯ "ಬೀಗದ ಕೈ" ಯಾವುದೆಂದರೆ –


ಸತ್ಯವೇದದಲ್ಲಿರುವ **“ಇಲ್ಲಿ ಸ್ವಲ್ಪ ಮತ್ತು ಅಲ್ಲಿ ಸ್ವಲ್ಪ”** ದಿಂದ ಹುಡುಕಿ ನಮಗೆ ಬೇಕಾಗಿರುವ ವಿಷಯವನ್ನು ಅಭ್ಯಾಸ ಮಾಡುವುದು.

ಉದಾಹರಣೆಗೆ: ರಕ್ಷಣೆ, ದೀಕ್ಷಾಸ್ನಾನ, ಸಭೆ, ಆತ್ಮ ಮುಂತಾದ ವಿಷಯಗಳ ಅಧ್ಯಯನಕ್ಕೆ ಸತ್ಯವೇದದಲ್ಲಿನ ನಿರ್ದಿಷ್ಟ ಪದಕ್ಕೆ ಸಂಬಂಧಿಸಿದಂತಹ ಎಲ್ಲಾ ವಾಕ್ಯಗಳನ್ನು ಹೇಗೆ ಗುರುತಿಸಬಹುದು ಮತ್ತು ಕಂಡು ಹಿಡಿಯಬಹುದೆಂದು ನೀವು ಆಶ್ಚರ್ಯಪಡಬಹುದು.

**ಇದು ಅತಿ ದೊಡ್ಡ ಕೆಲಸ !**

ಆದರೆ ದೇವರ ಕೃಪೆಯು ಈ ಕೊನೆಯ ದಿನಗಳಲ್ಲಿ ಕ್ರೈಸ್ತರ ಮೇಲೆ ಇದೆ.

ಹೌದು! ನಿರ್ದಿಷ್ಟ ವಿಷಯಗಳಿಗೆ ಬೇಕಾದ ವಿವಿಧ ವಾಕ್ಯಗಳನ್ನು ಕಂಡು ಹಿಡಿಯಲು ನಮಗೆ ಕನ್ಕಾರ್ಡೆನ್ಸ್ ಎಂಬ ಪುಸ್ತಕವು ಸಹಾಯಕವಾಗಿದೆ. ಇದರಲ್ಲಿ ವಿವಿಧ ಪದಗಳಿಗೆ ಬೇಕಾದ ಎಲ್ಲಾ ವಾಕ್ಯಗಳು ಸಿಗುತ್ತದೆ.




"

ಎರಡು ಭರವಸೆ ಇಡತಕ್ಕ ಕನ್ಕಾರ್ಡೆನ್ಸ್ ಗಳನ್ನು ಬರೆದಿರುವರು ಯಾರೆಂದರೆ – **"ಯಂಗ್"** ಮತ್ತು **"ಸ್ಟ್ರಾಂಗ್"** ಎನ್ನುವವರು

ಆದ್ದರಿಂದ ಸಾಧಾರಣವಾಗಿ ಸತ್ಯವೇದವನ್ನು ಓದುವುದರಿಂದ ನಮಗೆ ಸತ್ಯವನ್ನು ಕಂಡು ಹಿಡಿಯುವದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಇದು "ಇಲ್ಲಿ ಸ್ವಲ್ಪವು ಅಲ್ಲಿ ಸ್ವಲ್ಪವು" ಇದೆ

**ಈ ವಿಧವನ್ನು ನಾವು ಅನುಸರಿಸುವಾಗ ಸತ್ಯವೇದದ ವಿವಿಧ ವಿಷಯಗಳನ್ನು ಆಶೀರ್ವಾದದಾಯಕವಾಗಿ ಮತ್ತು ಫಲಕಾರಿಯಾಗಿ ಅಭ್ಯಾಸ ಮಾಡಬಹುದು ಮತ್ತು ಒಬ್ಬನು ದೇವರ ವಾಕ್ಯದಲ್ಲಿರುವ ಸತ್ಯವನ್ನು ಸರಿಯಾಗಿ ತಿಳಿದುಕೊಳ್ಳಬಹುದು.**

ಸತ್ಯವೇದದ ಈ "ಮೂರು ಬಂಗಾರದ ಕೈಗಳನ್ನು" ಅರಿತು ಕೊಂಡ ಮೇಲೆ, ಈಗ ನಾವು ದೇವರ ವಾಕ್ಯವು ಹೇಗೆ ಸಾಂಕೇತಿಕವಾಗಿದೆ ಎಂದು ನೋಡೋಣ –

## “ಬೆಂಕಿ ಮತ್ತು ಚಮಟಿಗೆ (ಸುತ್ತಿಗೆ)”





### ಯೆರೆಮೀಯ 23:29

"ಹೊಟ್ಟೆಲ್ಲಿ? ಕಾಳೆಲ್ಲಿ? ನನ್ನ ವಾಕ್ಯವು ಬೆಂಕಿಗೂ ಬಂಡೆಯನ್ನು ಒಡೆದು ಬಿಡುವ ಚಮಟಿಗೆಗೂ ಸಮಾನವಾಗಿದೆಯಲ್ಲಾ ಯೆಹೋವನೇ ಇದನ್ನು ನುಡಿದಿದ್ದಾನೆ. "

ಹೌದು! ಇಲ್ಲಿ ದೇವರ ವಾಕ್ಯವನ್ನು “ಬೆಂಕಿ” ಮತ್ತು "ಚಮಟಿಗೆ" ಗೂ ಹೋಲಿಸಲಾಗಿದೆ.

ಇದರ ಅರ್ಥವೇನು?

ಬೆಂಕಿಯು ಸುಡುವ ಮತ್ತು ಶುದ್ಧೀಕರಿಸುವ ಎರಡು ಕಾರ್ಯವನ್ನು ಮಾಡುವ ವಸ್ತುವಾಗಿದೆ. ಲೋಹಗಳ ವಿಷಯಗಳಲ್ಲಿ, ಬೆಂಕಿಯೂ ಅದನ್ನು ಅನೇಕ ಅಶುದ್ಧತೆಗಳಿಂದ ಶುದ್ಧೀಕರಿಸುವ ಕಾರ್ಯ ನಿರ್ವಹಿಸುತ್ತದೆ.

ಅದೇರೀತಿ.......ದೇವರವಾಕ್ಯವು ಬೆಂಕಿಯಂತೆ ಪಾಪವನ್ನು ಅಳಿಸಿ,
ಹೃದಯವನ್ನು ಎಲ್ಲಾ ವಿಧವಾದ ಪಾಪ ಮತ್ತು ಅಶುದ್ಧತೆಯಿಂದ ಶುದ್ಧೀಕರಿಸುತ್ತದೆ.

ಇಲ್ಲಿ ಸೂಚಿಸಲಾಗಿರುವ ಚಮಟಿಗೆಯೂ, ದೊಡ್ಡ ಬಂಡೆ ಕಲ್ಲುಗಳನ್ನು ಒಡೆದುಹಾಕುವ ಬಹಳ ದೊಡ್ಡದಾದ ಮತ್ತು ಬಲವಾದ ಬಂಡೆಯ ಚಮಟಿಗೆಯಾಗಿದೆ.

ಅದೇ ರೀತಿ ದೇವರ ವಾಕ್ಯವೂ ದೊಡ್ಡ ಚಮಟಿಗೆಯ ಹಾಗಿದೆ.


ಅದು ಪಾಪ ಮತ್ತು ಸ್ವಾರ್ಥತೆಯಿಂದ ಕಲ್ಲಿನಂತೆ ಕಠಿಣಗೊಂಡಿರುವ ಹೃದಯವನ್ನು ಒಡೆದು ಬಿಡುಗಡೆಮಾಡುತ್ತದೆ.

ನಂತರ ನಾವು ಬೆಳಕಿನ ಸಂಕೇತವನ್ನು ಹೀಗೆ ಓದುತ್ತೇವೆ–

## ಬೆಳಕು

### ಕೀರ್ತನೆಗಳು 119:105

"ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ. "



ಹೌದು! ಇಲ್ಲಿ ದೇವರ ವಾಕ್ಯವು "ಬೆಳಕಿಗೆ" ಸಂಕೇತವಾಗಿದೆ

**ಇದರ ಅರ್ಥವೇನು?**

ಈ ಸಂಕೇತವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ನಾವು ಮುಂದಿನ ವಾಕ್ಯವನ್ನು ಓದಬೇಕು–

**ಯೆಶಾಯ 60:2**

"ಇಗೋ ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗವನ್ನು ಮುಚ್ಚಿದೆ."

ಇದು ನಿಜವಾದ "ಕತ್ತಲು" ಅಲ್ಲ, ಆದರೆ ಸಾಂಕೇತಿಕ ಕತ್ತಲು!

ಇಡೀ ಲೋಕ ಮತ್ತು ಅದರಲ್ಲಿನ ಜನರೆಲ್ಲರನ್ನು "ಕತ್ತಲು" ಮುಚ್ಚಿದೆ ಎನ್ನಲಾಗಿದೆ.

ಈ "ಕತ್ತಲಿನ" ಅರ್ಥವನ್ನು ನಾವು ತಿಳಿದುಕೊಳ್ಳಬೇಕಾದರೆ ನಾವು ಸಾಂಕೇತಿಕ ಭಾಷೆಯ "ಬೆಳಕನ್ನು" ನೋಡಬೇಕು.

ಹೌದು! ದೇವರ ವಾಕ್ಯದ "ಬೆಳಕೇ" ಸತ್ಯವು (ಯೋಹಾನ 17:17) ಮತ್ತು "ಕತ್ತಲು" ಅಸತ್ಯವನ್ನು ಸೂಚಿಸುತ್ತದೆ.

**"ಕತ್ತಲೆ" (ಅಸತ್ಯ) ತುಂಬಿರುವ ಲೋಕದಲ್ಲಿ ದೇವರ ವಾಕ್ಯವು "ಬೆಳಕಾಗಿದೆ" (ಸತ್ಯ)**

ನಂತರ ನಾವು ಕತ್ತಿಯ ಸಂಕೇತವನ್ನು ಹೀಗೆ ಓದುತ್ತೇವೆ–

## ಕತ್ತಿ



**ಎಫೆಸದವರಿಗೆ 6:17**

"ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ."

ಹೌದು! ಇಲ್ಲಿ ಕತ್ತಿಯು ದೇವರ ವಾಕ್ಯಕ್ಕೆ ಸಂಕೇತವಾಗಿದೆ!

ಕತ್ತಿಯು ಯುದ್ಧದ ಆಯುಧ, ಆದರೆ ಇಲ್ಲಿ ಇದರ ಅರ್ಥವು ಆತ್ಮೀಕವಾಗಿದೆ!

ಹೌದು! ದೇವರ ವಾಕ್ಯವು ದುಷ್ಟತನ ಮತ್ತು ಕೆಟ್ಟತನಕ್ಕೆ ವಿರೋಧವಾಗಿ ಹೋರಾಡುವ ಆತ್ಮೀಕ ಯುದ್ಧದ ಆಯುಧವಾಗಿದೆ, ಇಬ್ರಿಯರಿಗೆ 4:12 ರಲ್ಲಿ ಓದುವಂತೆ

"ಯಾಕೆಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು.........."

ಹದವಾದ ಇಬ್ಬಾಯಿಕತ್ತಿಯು ದೇವರ ಸತ್ಯವಾಕ್ಯವನ್ನು ಕೇಳುವ ಮತ್ತು ಬೋಧಿಸುವ ಇಬ್ಬರ ಮೇಲೂ ಪರಿಣಾಮ ಬೀರುತ್ತದೆ ಎಂಬುದಕ್ಕೆ ಸಾಂಕೇತಿಕವಾಗಿದೆ!!

ಕೊನೆಯದಾಗಿ ನಾವು ಮತ್ತೊಂದು ಸಂಕೇತವನ್ನು ನೋಡೋಣ.

## ಆಹಾರ

### ಧರ್ಮೋಪದೇಶಕಾಂಡ 8:3

"ಮನುಷ್ಯರು ಆಹಾರಮಾತ್ರದಿಂದಲ್ಲ, ಯೆಹೋವನ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುತ್ತಾರೆಂಬದು............."

ಹೌದು! ಇಲ್ಲಿ ದೇವರ ವಾಕ್ಯವನ್ನು "ಆಹಾರ"ಕ್ಕೆ ಹೋಲಿಸಲಾಗಿದೆ.

ಅದು ಮನುಕುಲದ ಜೀವಕ್ಕೆ ಹಾಗೂ ಬೆಳವಣಿಗೆಗೆ ಬೇಕು.

ಅವನು ನಿತ್ಯಜೀವವನ್ನು ಪಡೆಯಲು ಬೇಕಾದ ತಿಳುವಳಿಕೆಯ ಕಡೆಗೆ ಸಾಗಲು ಮತ್ತು ಗಳಿಸಲು ಒಂದು ಸಾಧನವಾಗಿದೆ




ಕೊನೆಯದಾಗಿ ನಾವು ಇದನ್ನು ಓದಿಕೊಳ್ಳೋಣ.

### 2 ತಿಮೊಥೆಯನಿಗೆ 3:16,17

"ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. ಆದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು."

## ಹೌದು! ದೇವರ ಸೇವೆಮಾಡುಲು ಎಲ್ಲಾ ಸತ್ಯಗಳ ಸರಿಯಾದ ಮತ್ತು ಪೂರ್ಣವಾದ ಜ್ಞಾನ ಅವಶ್ಯ.





ದೇವರ ಪುರುಷ (ಮತ್ತು ಸ್ತ್ರೀ) ಯಾಗಲು ಈ ವಾಕ್ಯಗಳಿಗೆ ಎಚ್ಚರಿಕೆಯಿಂದ ಗಮನ ಕೊಡುವುದು ಹಾಗೂ ಸತ್ಯವೇದದ ವಾಕ್ಯಗಳನ್ನು ಸರಿಯಾಗಿ ಅಧ್ಯಯನ ಮಾಡುವುದು ಅಗತ್ಯವಾಗಿದೆ.

**ಈ ದಿನ ನಾವು ಆ ದಾರಿಯ ಕಡೆಗೆ ಮೊದಲ ಹೆಜ್ಜೆಯಿಟ್ಟಿದ್ದೇವೆ!**



**---Amen !---**




For Private Circulation Only

NOT FOR SALE

**Jesus Loves** *Ministry*

For free indepth Bible study contact

Br.Raju 8867768876

# 1, BETHESDA, 1st floor, Janani Enclave, 1st cross,
Thiglarapalya Andrahalli Main Rd, B'lore 560058

Email : rajudawn@yahoo.com

YouTube SUBSCRIBE TO OUR CHANNEL

Available Languages : Kannada, English, Hindi, Tamil and Telugu